# ಪ್ರಕೃತಿ ಪೂಜೆ

'ಸಂಕಟ ಬಂದಾಗ ವೆಂಕಟರಮಣ' ಎನ್ನುವುದು ಹಿರಿಯರು ನಮಗೆ ಅನುಭವದ ಬುತ್ತಿಯ ರೂಪದಲ್ಲಿ ಕೊಟ್ಟ ಮಾತುಗಳಲ್ಲೊಂದು. ಜೀವನದಲ್ಲಿ ಎಲ್ಲವೂ ಸರಿಯಾಗಿದ್ದಾಗ ಮನುಷ್ಯನಿಗೆ ದೇವರ ಹಂಗಿಲ್ಲ. ಆದರೆ, ಅನುದಿನದ ಬದುಕಿನಲ್ಲಿ ಕೊಂಚ ಏರುಪೇರಾದರೂ ದೇವರ ನೆನಪಾಗುತ್ತದೆ. ದೇವರಲ್ಲದೆ ನಮ್ಮನ್ನು ಇನ್ನಾರು ಕಾಯಬೇಕು? ಇಂದಿನ ಸಂದರ್ಭ ನೋಡಿ. ಸಂಕಟ ಬಂದಾಗ ವೆಂಕಟರಮಣನೂ ನಮ್ಮ ಪಾಲಿಗಿಲ್ಲ. ದೇವರ ಕುರಿತ ನಮ್ಮ ನಂಬಿಕೆ ಇಷ್ಟರಮಟ್ಟಿಗೆ ಕೈಕೊಟ್ಟ ಸಂದರ್ಭ ಮನುಕುಲದ ಇತಿಹಾಸದಲ್ಲಿ ಹೆಚ್ಚಿರಲಿಕ್ಕಿಲ್ಲ. ನಾವು ದೇವರಿಂದ ದೂರವಾಗಿದ್ದೇವೆಯೋ, ದೇವರೇ ನಮ್ಮಿಂದ ದೂರವಾಗಿದ್ದಾನೋ ಆತ್ಮವಿಮರ್ಶೆ ಮಾಡಿಕೊಳ್ಳಲಿಕ್ಕೆ ಒಂದು ನೆಪವಾಗಿ ಕೊರೊನಾ ಕಾಲಘಟ್ಟ ಒದಗಿಬಂದಿದೆ.

'ನಮ್ಮ ಅನುಭವವನ್ನು ಮೀರಲಾಗದ ದೇವರು' ಎನ್ನುತ್ತಾರೆ ಶಿವರಾಮ ಕಾರಂತರು. 'ದೇವರು ಬೇಕು, ಆದರೆ ಅವನಿಲ್ಲ' ಎನ್ನುತ್ತಾರೆ 'ದೇವರು' ಎನ್ನುವ ಕೃತಿಯನ್ನೇ ರಚಿಸಿದ ಎ.ಎನ್. ಮೂರ್ತಿರಾಯರು. ಕಾರಂತರ ಮಾತನ್ನೇ ಇನ್ನೊಂದು ರೂಪದಲ್ಲಿ ಮೂರ್ತಿರಾಯರೂ ಹೇಳುತ್ತಿದ್ದಾರೆ. ಇಬ್ಬರೂ ದೇವರ ಅಸ್ತಿತ್ವವನ್ನು ನಿರಾಕರಿಸುತ್ತಿಲ್ಲ. ದೇವರ ಅಗತ್ಯವನ್ನೂ ಬೇಡವೆನ್ನುತ್ತಿಲ್ಲ. ಆದರೆ, ಅವನ ಇರುವಿನ ಬಗ್ಗೆ ಇಬ್ಬರಿಗೂ ನಂಬಿಕೆಯಿಲ್ಲ. ಜೀವಕೋಟಿಯ ಸಂಕಟಗಳಿಗೆ ಮಿಡಿಯುವ ಶಕ್ತಿಯೊಂದಿದ್ದರೆ ಯಾರು ಬೇಡವೆನ್ನುತ್ತಾರೆ. ತುದಿಮೊದಲಿಲ್ಲದ ಸಂಕಷ್ಟಗಳಿಗೆ ಸಿಲುಕಿರುವ ಜನಸಾಮಾನ್ಯರಿಗೆ ಯಾವುದಾದರೊಂದು ಶಕ್ತಿ ನೆಮ್ಮದಿ ತಂದುಕೊಡುತ್ತದೆ ಎನ್ನುವುದಾದರೆ, ಆ ಶಕ್ತಿಯನ್ನು ದೇವರೆನ್ನಲಿಕ್ಕೆ ಯಾರಿಗೂ ತಕರಾರಿಲ್ಲ. ಹಾಗೆನೋಡಿದರೆ, ಮೂರ್ತಿರಾವ್ ಅವರು ದೇವರಿಗಾಗಿ ಹಂಬಲಿಸುತ್ತಿದ್ದಾರೆ. ಆದರೆ, ಈ ಸಮಾಜದ ಆಳ ಅಗಲಗಳನ್ನು ಬಲ್ಲ ಯಾರಿಗಾದರೂ ದೇವರಿದ್ದಾನೆ ಎಂದು ಹೇಳುವುದು ಸಾಧ್ಯವೆ?

ಕಾರಂತರು 'ಬಾಳ್ವೆಯೇ ಬೆಳಕು' ಎಂದು ನೆಚ್ಚಿದವರು. ಆ ಕಾರಣದಿಂದಲೇ ಅವರಿಗೆ ದೇವರು ಕೂಡ ಅನುಭವದ ಭಾಗವಲ್ಲದೆ ಬೇರೇನೂ ಅಲ್ಲ. ನಮ್ಮ ಅನುಭವದ ಅಳತೆಯನ್ನು ದೇವರು ಮೀರಲಾರ ಎನ್ನುವ ಅವರ ಮಾತು, ದೇವರ ಕುರಿತ ನಂಬಿಕೆ ವೈಯಕ್ತಿಕವಾದುದು ಎನ್ನುವುದನ್ನು ಸೂಚಿಸುತ್ತದೆ. ನಾವು ನಮ್ಮ ಅನುಭವಕ್ಕೆ ತಕ್ಕಂತೆ ದೇವರನ್ನು ಚಿತ್ರಿಸಿಕೊಂಡಿದ್ದೇವೆ. ನಮ್ಮ ಮಿತಿಗಳು ಅರಿವಿಗೆ ಬಂದಂತೆ, ಅವುಗಳನ್ನು ಮೀರಲೆಂಬಂತೆ ದೇವರನ್ನು ಶಕ್ತಿವಂತನನ್ನಾಗಿಸಿದ್ದೇವೆ; ಸರ್ವಾಂತರ್ಯಾಮಿ ಆಗಿಸಿದ್ದೇವೆ. ಎರಡಕ್ಕಿಂತಲೂ ಹೆಚ್ಚು ಕೈ, ಆ ಕೈಗಳಲ್ಲಿ ಆಯುಧ, ಇವೆಲ್ಲವೂ ನಮ್ಮ ಶಕ್ತಿಯ ಮಿತಿಯನ್ನು ಮತ್ತಾವುದೋ ರೂಪದಲ್ಲಿ ತುಂಬಿಕೊಳ್ಳುವ ಪ್ರಯತ್ನಗಳೇ ಆಗಿವೆ. ಕಲ್ಪನೆಯೊಂದಿಗೆ ಸೃಜನಶೀಲತೆಯೂ ಸೇರಿಕೊಂಡು 'ನಮ್ಮ ದೇವರು' ಅಪಾರ ಶಕ್ತಿವಂತನಾಗಿ ರೂಪುಗೊಂಡಿದ್ದಾನೆ. ನಮ್ಮ ಕಲ್ಪನೆ, ಸೃಜನಶೀಲತೆ ಹೆಚ್ಚಾದಂತೆಲ್ಲ ನಮ್ಮ ದೇವರೂ ಹೆಚ್ಚು ಹೆಚ್ಚು ದೊಡ್ಡವನಾಗುತ್ತಾನೆ. ಇದು ದೇವರ ಕುರಿತಂತೆ ಕಾರಂತರ ವಿಚಾರ.

ನಮ್ಮ ಪೂರ್ವಸೂರಿಗಳ ಪಾಲಿಗೆ ದೇವರು ದೈನಿಕದ ಭಾಗವಾಗಿದ್ದ. ನೈತಿಕತೆ, ಆತ್ಮಸಾಕ್ಷಿಯ ರೂಪದಲ್ಲಿದ್ದ. ದೇವರಿಗೆ ಅವರು ಅಂಜುತ್ತಿದ್ದರು. ದೇವರನ್ನು ಸಂಪ್ರೀತಗೊಳಿಸಲು ಪೂಜೆ ಪುನಸ್ಕಾರಗಳನ್ನು ರೂಪಿಸಿಕೊಂಡರು. ಅವು ಅಳತೆಮೀರಿ ಮೌಢ್ಯದ ರೂಪು ಪಡೆದಿರುವುದೂ ಇದೆ; ಅಮಾಯಕರ ಶೋಷಣೆಗೆ ಕಾರಣವಾಗಿರುವುದೂ ಇದೆ. ಆಚರಣೆಯಲ್ಲಿ ದೋಷವಿದೆಯೆಂದು, ದೇವರ ಪರಿಕಲ್ಪನೆಯನ್ನೇ ಮೌಢ್ಯ ಎನ್ನಲಾಗದು. ಬದುಕಿನಲ್ಲಿ ಭರವಸೆಗಳನ್ನೆಲ್ಲ ಕಳೆದುಕೊಂಡಾಗ, ಮನುಷ್ಯರ ಮೇಲಿನ ನಂಬಿಕೆಗಳು ಹುಸಿಯಾದಾಗ ಆಸರೆಗೊಂದು ಹೆಗಲು ಬೇಕಲ್ಲ. ಆ ಹೆಗಲಿನ ರೂಪದಲ್ಲಿ ದೇವರು ತಲೆಮಾರುಗಳಿಂದ ತಲೆಮಾರುಗಳಿಗೆ ಉಳಿದುಬಂದಿದ್ದಾನೆ. ದೇವರು ತನ್ನ ಕೈಯಾರೆ ನಮ್ಮ ಕಣ್ಣೀರು ಒರೆಸಲಾರ. ಜಾದೂ ಮಾಡಿ ನಮ್ಮ ಸಂಕಟವನ್ನು ಸಂತಸವಾಗಿ ಬದಲಿಸಲಾರ. ಆದರೆ, ಬದುಕಿನ ಬಗ್ಗೆ ವಿಶ್ವಾಸ ಕಳೆದುಕೊಂಡಾಗ, ಬೆಳ್ಳಿಚುಕ್ಕಿಯಂತೆ ದೇವರು ಭಾಸವಾಗುತ್ತಾನೆ. ಕೋಟ್ಯಂತರ ಜನ ನಾಳೆಗಳ ಬಗ್ಗೆ ಯಾವುದೋ ನಿರೀಕ್ಷೆ ಉಳಿಸಿಕೊಂಡು, ಇಂದಿನ ದಂದುಗವನ್ನು ನಿಭಾಯಿಸುತ್ತಿರುವುದಕ್ಕೆ ಜೀವದ್ರವ್ಯವಾಗಿ ಪರಿಣಮಿಸಿರುವುದು ದೇವರೆನ್ನುವ ಅಗೋಚರ ಶಕ್ತಿಯೇ ಹೊರತು, ಯಾವ ವೈಚಾರಿಕತೆಯೂ ಅಲ್ಲ.

ದೇವರೆಂದರೆ ಹೊಂಗೆಮರ ಎಂದುಕೊಳ್ಳಿ. ನೆತ್ತಿಯಿಂದ ಅಂಗಾಲಿನವರೆಗೂ ಬಿಸಿಲು ಸುಡುವಾಗ, ಹೊಂಗೆಯ ನೆರಳಿಗೆ ಹೋದರೆ ಮೈಮನಗಳಿಗೆ ಹಾಯೆನಿಸುತ್ತದೆ. ಮರದ ನೆರಳಿನಿಂದ ಹೊರಬಂದರೆ ಮತ್ತದೇ ಸುಡುವಾಸ್ತವ. ಹಾಗೆಂದು, ಒಂದಷ್ಟು ಸಮಯ ತಂಪಿನ ಅನುಭವ ಕೊಟ್ಟ ಹೊಂಗೆಮರವನ್ನು, ಅದರ ನೆರಳನ್ನು ಸುಳ್ಳೆನ್ನಲಾದೀತೆ? ಬಿಸಿಲಿನ ತಾಪ ಹಾಗೂ ನೆರಳಿನ ಹಿತದ ಅನುಭವವನ್ನು ಅನುಭವಿಸಿಯೇ ತೀರಬೇಕು.

ಕೊರೊನಾ ಕಾಲಘಟ್ಟ ಬದುಕಿನ ಅನೇಕ ನಂಬಿಕೆಗಳನ್ನು ಪುನರ್ ಪರಿಶೀಲಿಸಿಕೊಳ್ಳಲು ಒತ್ತಾಯಿಸುತ್ತಿದೆಯಷ್ಟೆ. ದೇವರ ಕುರಿತ ನಮ್ಮ ನಂಬಿಕೆಗಳನ್ನೂ ಉಜ್ಜಿ ನೋಡಿಕೊಳ್ಳಬೇಕಾದ ಸಂದರ್ಭ ಇಂದಿನದು. ವೆಂಕಟರಮಣನೂ ನಮ್ಮ ಸಂಕಟಕ್ಕೆ ಓಗೊಡದ ದಿನಗಳಿವು. ಯಾಕೆ ಹೀಗಾಯಿತು? ದೇವರನ್ನು ದೇಗುಲಕ್ಕೆ ಸೀಮಿತಗೊಳಿಸಿದ್ದೂ ಇಂದಿನ ಬಿಕ್ಕಟ್ಟಿಗೊಂದು ಕಾರಣವಿರಬಹುದು. ನಮ್ಮ ಹಿರಿಯರು ಪ್ರಕೃತಿಯನ್ನೂ ದೇವರ ರೂಪವಾಗಿ ಕಂಡಿದ್ದರು. ಕಾಡು, ಹೊಳೆ, ಗುಡ್ಡಗಳೆಲ್ಲವೂ ದೈವದ ನೆಲೆಗಳಾಗಿದ್ದವು. ಆ ನಂಬಿಕೆಗಳನ್ನು ನಾವು ಸವಕಳಿ ಮಾಡುತ್ತಾ ಹೋದಂತೆ, ಸಮಸ್ಯೆಗಳೂ ಹೆಚ್ಚಾದವು. ಕಾಡು, ಹೊಳೆ, ಗುಡ್ಡಗಳು ನಮ್ಮ ಕಣ್ಣುಗಳಿಗೆ ಸಂಪತ್ತಿನಂತೆ ಸರಕಿನಂತೆ ಕಾಣಿಸಿದವು. ಪರಿಣಾಮ ಏನಾಯಿತು? ಕಾಡು ಕಡಿದೆವು. ಹೊಳೆ ಬಗ್ಗಡಗೊಳಿಸಿದೆವು. ಗುಡ್ಡಗಳ ಮಟ್ಟಸ ಮಾಡಿದೆವು. ಕಾಡು ಮತ್ತು ನಾಡಿನ ನಡುವಿನ ಗೆರೆ ತೆಳುವಾದಂತೆ ಹೊಸ ಹೊಸ ಬಿಕ್ಕಟ್ಟುಗಳು ಕಾಣಿಸಿಕೊಂಡವು. ಕೊರೊನಾ ಕೂಡ ಅಂಥದೊಂದು ಬಿಕ್ಕಟ್ಟು.

ಈಗ ನಾವು ಮಾಡಬೇಕಾದುದು, ಹಿರೀಕರು ತೋರಿದ ವಿವೇಕದ ದಾರಿಗೆ ಮತ್ತೆ ಹೊರಳುವುದು. ಗುಡಿಯ ದೇವರು ಓಗೊಡದಾಗ, ಪ್ರಕೃತಿದೇವರಿಗೆ ಶರಣಾಗದೆ ಅನ್ಯಮಾರ್ಗವಿಲ್ಲ. ಪ್ರಕೃತಿ ನಮ್ಮ ಕೈಹಿಡಿದು ನಡೆಸಬೇಕೆ ಹೊರತು ನಾವು ಅದರ ಕೈಹಿಡಿಯುವ ಹಸ್ತಕ್ಷೇಪ ಮಾಡಬಾರದು.

■ ವಿ.ಆರ್.

## ಮಾತೇ ಮುತ್ತು

- ಮಹಿಳೆಯರ ಎದುರು ಮಾತ್ರ ಶೀಲ–ಸಂಕೋಚಗಳ ಮೂರ್ತಿಗಳಾಗುತ್ತೇವೆ.
  —ಪ್ರೇಮಚಂದ್
- ಒಂದು ಜನಾಂಗ ಎಷ್ಟರಮಟ್ಟಿಗೆ ಮುಂದುವರಿದಿದೆ ಎನ್ನುವುದನ್ನು ನೋಡಬೇಕಾದರೆ ಆ ಜನಾಂಗ ಸ್ತ್ರೀಯರನ್ನು ಯಾವ ದೃಷ್ಟಿಯಲ್ಲಿ ನೋಡುತ್ತಿದೆ ಎನ್ನುವುದೇ ಒರೆಗಲ್ಲು.
  —ಸ್ವಾಮಿವಿವೇಕಾನಂದ
- ಜನರ ವಿವಿಧ ಅಭಿರುಚಿಗಳ ಸಂತುಷ್ಟಿಯೇ ನಾಟಕದ ಉದ್ದೇಶ.
  —ಕಾಳಿದಾಸ
- ಕೋಪಿಸುವುದೆಂದರೆ ಇತರರ ತಪ್ಪನ್ನು ನಮ್ಮ ಮೇಲೆ ಸೇಡು ತೀರಿಸಿಕೊಂಡಂತೆ.
  —ಪೋಪ್
- ದಾನಗುಣದಿಂದ ಮನುಷ್ಯ ಸುಖಿಯಾಗುವನು.
  —ವಿಷ್ಣುಶರ್ಮ
- ವಿಜಯ ಮುಖ್ಯ, ಆದರೂ ಅದನ್ನು ಪಡೆಯುವ ಮಾರ್ಗವೂ ಅಷ್ಟೇ ಮುಖ್ಯ.
  —ಜವಾಹರಲಾಲ್ ನೆಹರು
- ಯಶಸ್ಸಿನ ಮೂಲ ತತ್ವ ಏನೆಂದರೆ ಹಿಡಿದ ಕೆಲಸವನ್ನು ಬಿಡದೆ ಮಾಡುವುದು.
  —ವಾಲ್ಟೇರ್